(ಇಂದು ದಿನಾಂಕ 08-08-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎನ್.ಎಮ್.ಎನ್. ವಕೀಲರಿಂದಃ**

ನನ್ನ ತಂದೆಯವರಿಗೆ ಕಾಲು ಊರುಕೊಂಡು ನಡೆಯಲು ಸಾಧ್ಯವಾಗುತ್ತಿಲ್ಲ. ನನ್ನ ತಂದೆಯವರಿಗೆ ಹೇಳುವ ವಿಷಯವೆಲ್ಲ ಅರ್ಥವಾಗುವ ಸಾಮರ್ಥ್ಯ ಇರುತ್ತದೆ. ಸುಮಾರು 4 ವರ್ಷಗಳಿಂದ ನಮ್ಮ ತಂದೆಯವರಿಗೆ ತಿರುಗಾಡಲು ಸಾಧ್ಯವಾಗುತ್ತಿಲ್ಲ. ನನ್ನ ತಂದೆಯವರಿಗೆ ಮನೆಯ ಹೊರಗಡೆ ತಿರುಗಾಡಲು ಆಗುವುದಿಲ್ಲ. ನನ್ನ ಅಜ್ಜನಿಗೆ ತಂದೆಯವರು ಸೇರಿ ಒಟ್ಟಿಗೆ 3 ಜನ ಮಕ್ಕಳು. 2 ನೇ ವಾದಿಯು ನನ್ನ ದೊಡ್ಡಪ್ಪ. 3 ನೇ ವಾದಿಯು ನನ್ನ ಚಿಕ್ಕಪ್ಪ. ನಾನು 1 ನೇ ವಾದಿಯ ಮಗ. ನನಗೆ ದಾವೆಯನ್ನು ನಡೆಸಲು ನನ್ನ ತಂದೆಯವರು ಮಾತ್ರ ಮೊಕ್ತ್ಯಾರುನಾಮೆಯನ್ನು ಬರೆದುಕೊಟ್ಟಿರುತ್ತಾರೆ. 2 ನೇ ವಾದಿಗೆ ಈಗ 73 ವರ್ಷ. 3 ನೇ ವಾದಿಗೆ 58 ವರ್ಷ. 2 ನೇ ಹಾಗೂ 3 ನೇ ವಾದಿಗಳು ಅವರವರ ಕೆಲಸ ಮಾಡಿಕೊಂಡು ಆರೋಗ್ಯದಿಂದ ಇದ್ದಾರೆ. 2 ಹಾಗೂ 3 ನೇ ವಾದಿಯವರ ವಯಸ್ಸನ್ನು ದಾವೆ ಶಿರೋನಾಮೆಯಲ್ಲಿ ನಮೂದಿಸಿದ್ದು ಇರುವುದಿಲ್ಲ. 1 ನೇ ಪ್ರತಿವಾದಿಯು ನನ್ನ ತಂದೆಯ ತಮ್ಮನ ಹೆಂಡತಿ. ವಾದಿಯವರ ತಂದೆ ಹಾಗೂ 1 ನೇ ಪ್ರತಿವಾದಿಯ ಗಂಡ ಅಣ್ಣ ತಮ್ಮಂದಿರು. 1 ನೇ ವಾದಿಯ ತಂದೆ ಹಾಗೂ 1 ನೇ ಪ್ರತಿವಾದಿಯ ಗಂಡ ಹೊಲಿಯಪ್ಪನ ಮಕ್ಕಳು. ದಾವಾಸ್ತಿಯ ಬಗ್ಗೆ ನನಗಿಂತ ಜಾಸ್ತಿ ನನ್ನ ತಂದೆಯವರಿಗೆ ಜಾಸ್ತಿ ಅರಿವು ಇದೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಹೊರತುಪಡಿಸಿ ಇನ್ನು ಬೇರೆ ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಯಲ್ಲಿ ಸಾಗುವಳಿ ಮಾಡಿಕೊಂಡು ಬಂದಿದ್ದು ಇರುವುದಿಲ್ಲ. ದಾವಾಸ್ತಿಯು ನನ್ನ ತಂದೆ ಹಾಗೂ ಅವರ ತಮ್ಮಂದಿರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯಲ್ಲಿ ನನ್ನ ಮುತ್ತಜ್ಜನಾದ ಹೊಲಿಯಪ್ಪನ ಕಾಲದಿಂದಲೂ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ. ದಾವಾಸ್ತಿಗೆ ಸಂಬಂಧಪಟ್ಟಂತೆ ಕುಟುಂಬದ

ನಡುವೆ ಯಾವುದೇ ವಾಂಟಣೆ ಆಗಿದ್ದು ಇರುವುದಿಲ್ಲ. ವಾದಿಗಳು ಹಾಗೂ ಪ್ರತಿವಾದಿಯವರು ದಾವಾಸ್ತಿಯಲ್ಲಿ ಪ್ರತ್ಯೇಕ ಮನೆ ಮಾಡಿಕೊಂಡು ವಾಸ್ತವ್ಯ ಮಾಡಿಕೊಂಡು ಬಂದಿರುತ್ತಾರೆ. ದಾವಾಸ್ತಿಯು ನಮ್ಮ ತಂದೆ ಹಾಗೂ ತಮ್ಮಂದಿರಿಗೆ ಹೇಗೆ ಬಂತು ಎಂದು ನನ್ನ ತಂದೆಯವರ ಬಳಿ ವಿಚಾರಿಸಿದಾಗ ಅಜ್ಜನ ಕಾಲದಿಂದಲೂ ಸಾಗುವಳಿ ಮಾಡಿಕೊಂಡು ಬಂದಿರುವುದಾಗಿ ನುಡಿಯುತ್ತಾರೆ. ದಾವಾಸ್ತಿಯು ನಮ್ಮ ಕುಟುಂಬಕ್ಕೆ ಹೇಗೆ ಬಂತು ಎಂದು ತೋರಿಸಲು ದಾಖಲೆಗಳನ್ನು ನಮ್ಮ ವಕೀಲರಿಗೆ ನೀಡಿದ್ದು ಇರುವುದಿಲ್ಲ. ನನ್ನ ತಂದೆಯವರು ದಾವಾಸ್ತಿ ಹೇಗೆ ಬಂತು ಎಂಬ ಬಗ್ಗೆ ನನಗೆ ಹೇಳಿದ್ದು ಇರುವುದಿಲ್ಲ.

**(ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ